**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ\9376\2017\ಉನಿವಿ–4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 24/06/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕ್ ಭದ್ರಾಪುರ ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿದ್ದ 1) ಶ್ರೀಮತಿ.ವಿಜಯಲಕ್ಷ್ಮಿ ಎಂ ಬರದೂರು, 2)ಶ್ರೀ.ವೀರಣ್ಣ ಆರ್ ತೊಗ್ಗಿ, 3) ಶ್ರೀ.ರಾಘವೇಂದ್ರ ಜಿ ಪೂಜಾರ್, ಅಧ್ಯಕ್ಷರುಗಳಾಗಿದ್ದ 4) ಶ್ರೀಮತಿ.ಸುಜಾತ ಯು ಗುಬ್ಬಿ ಮತ್ತು 5)ಶ್ರೀಮತಿ.ಕಮಲವ್ವ ಈ ಬಾರಕೇರ ರವರ ಕರ್ತವ್ಯ ಲೋಪದ ಬಗ್ಗೆ.

**********

ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕ್ ಭದ್ರಾಪುರ ಗ್ರಾಮ ನಿವಾಸಿಯಾದ ಶ್ರೀ.ಬಸವರಾಜ ಸಿದ್ದಪ್ಪ ತೋಟಕರ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕ್ ಭದ್ರಾಪುರ ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀಮತಿ.ವಿಜಯಲಕ್ಷ್ಮಿ ಎಂ ಬರದೂರು (ಇನ್ನು ಮುಂದೆ '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ಧಾರವಾಡ ಜಿಲ್ಲೆ, ನವಲಗುಂದ ತಾಲೂಕು, ಭ್ರದಾಪುರ ಗ್ರಾಮ ಪಂಚಾಯತನಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಮೂರು ಕ್ರಿಯಾ ಯೋಜನೆಗಳಾಗಿದ್ದು, ಅವುಗಳಲ್ಲಿ ಅವ್ಯವಹಾರ ನಡೆದಿದೆ. 2016–17 ರಿಂದ 2017–18ರಲ್ಲಿ ಮನೆಗಳ ಹಂಚಿಕೆಯಲ್ಲಿ ಸರ್ಕಾರ ನಿಗದಿಪಡಿಸಿದ ಮೀಸಲಾತಿಯನ್ನು ಸರಿಯಾದ ರೀತಿ ಪಾಲಿಸಿಲ್ಲ. ತಮಗೆ ಬೇಕಾದ ವ್ಯಕ್ತಿಗಳಿಗೆ ಮನೆಗಳನ್ನು ಹಂಚಿಕೆ ಮಾಡಿ ಅವ್ಯವಹಾರ ನಡೆಸಿದ ಪಂಚಾಯತಿಯಲ್ಲಿ ವಿದ್ಯುತ್ ಬಲ್ಬ್ ಖರೀದಿಯಲ್ಲಿ ತುಂಬಾ ಅವ್ಯವಹಾರ ನಡೆದಿದೆ ಪಂಚಾಯತಿಯಿಂದ ಅಗಸಿ ಬಾಗಿಲವರೆಗೆ ಮಾಡಿರುವ ಸಿ.ಸಿ ರಸ್ತೆ ಕಾಮಗಾರಿ ಕಳಪೆಯಾಗಿದೆಯೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನ ಎಲ್ಲಾ ಅಂಶಗಳನ್ನು ಅಲ್ಲಗಳೆದಿದ್ದಾರೆ.

4. 2015–16ನೇ ಸಾಲಿನಲ್ಲಿ ಭದ್ರಾಪುರ ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ.ವೀರಣ್ಣ ಆರ್ ತೊಗ್ಗಿ ಮತ್ತು ಶ್ರೀ.ರಾಘವೇಂದ್ರ ಜಿ ಪೂಜಾರ್ (ಹಾಗೂ ಪಂಚಾಯತಿ ಅಧ್ಯಕ್ಷರುಗಳಾದ ಶ್ರೀಮತಿ.ಸುಜಾತ ಯು ಗುಬ್ಬಿ ಮತ್ತು ಶ್ರೀಮತಿ.ಕಮಲವ್ವ ಈ ಬಾರಕೇರ ರವರುಗಳನ್ನು ಕ್ರಮವಾಗಿ, 2 ರಿಂದ 5ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ಆಕ್ಷೇಪಣೆಗಳನ್ನು ಕೇಳಲಾಯಿತು.

5. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ದಿನಾಂಕ:16/02/16ರವರೆಗೆ ಮಾತ್ರ ಭದ್ರಾಪುರ ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸಿದ್ದು, ತಮ್ಮ ಅವಧಿಯಲ್ಲಿ ಎಂಜಿಎನ್‌ಆರ್‌ಇಜಿ ಯೋಜನೆಯ ಕಾಮಗಾರಿಯನ್ನು ಮಾರ್ಗಸೂಚಿಯನ್ವಯ ನಿರ್ವಹಿಸಿದ್ದು, ವಿದ್ಯುತ್ ಬಲ್ಬ್‌ಗಳ ಖರೀದಿಯಲ್ಲೂ ಕೂಡ ನಿಯಮಾವಳಿ ಪ್ರಕಾರವೇ ಮಾಡಿರುವುದರಿಂದ, ಯಾವುದೇ ಹಣದ ಅವ್ಯವಹಾರ ಆಗಿಲ್ಲವೆಂದು ಹೇಳಿದ್ದಾರೆ.

6. ಮೂರನೇ (3ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಭದ್ರಾಪುರ ಗ್ರಾಮ ಪಂಚಾಯತಿಯಲ್ಲಿ ದಿ:22/07/16 ರಿಂದ 16/08/16ರವರೆಗೆ ಅಂದರೆ, 27 ದಿನಗಳು ಮಾತ್ರ ಕರ್ತವ್ಯ ನಿರ್ವಹಿಸಿರುವುದರಿಂದ, ದೂರಿನ ಆರೋಪಗಳು ತಮಗೆ ಅನ್ವಯಿಸುವುದಿಲ್ಲವೆಂದು ಹೇಳಿದ್ದಾರೆ.

7. ನಾಲ್ಕನೇ (4ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ತಾವು ಮಾರ್ಚ್, 2015ರವರೆಗೆ ಮಾತ್ರ ಭದ್ರಾಪುರ ಗ್ರಾಮ ಪಂಚಾಯತಿಯ ಅಧ್ಯಕ್ಷರ ಹುದ್ದೆಯಲ್ಲಿದ್ದು, ದೂರಿನ ಆಪಾದನೆಗಳು ತಮಗೆ ಸಂಬಂಧಪಡುವುದಿಲ್ಲವೆಂದು ಹೇಳಿದ್ದಾರೆ.

8. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಎಂಜಿಎನ್‌ಆರ್‌ಇಜಿ ಯೋಜನೆಯ ಕಾಮಗಾರಿಯ ಕೂಲಿ ಮೊತ್ತವು ನೇರವಾಗಿ ಕೂಲಿ ಕಾರ್ಮಿಕರ ಖಾತೆಗೆ ಜಮಾ ಆಗುವುದರಿಂದ, ಸದರಿ ಯೋಜನೆಯಲ್ಲಿ ಹಣ ದುರುಪಯೋಗ ಆಗಿದೆಯೆಂಬ ಆಪಾದನೆಯನ್ನು ಉದ್ದೇಶ ಪೂರ್ವಕವಾಗಿ ಮಾಡಿದೆ. ವಸತಿ ಯೋಜನೆಯ ಅಡಿಯಲ್ಲಿ ಅರ್ಹ ಫಲಾನುಭವಿಗಳನ್ನು ಮಾತ್ರ ಆಯ್ಕೆ ಮಾಡಿದೆ. 14ನೇ ಹಣಕಾಸು ಯೋಜನೆಯಡಿ ಮಾಡಿರುವ ಪಂಚಾಯತಿಯಿಂದ ಅಗಸಿ ಬಾಗಿಲ ವರೆಗೆ ಸಿಸಿ ರಸ್ತೆ ಕಾಮಗಾರಿಯ ಗುಣಮಟ್ಟವನ್ನು ತಾಂತ್ರಿಕ ಕಿರಿಯ ಮತ್ತು ಹಿರಿಯ ಅಭಿಯಂತರರುಗಳು ಪರಿಶೀಲಿಸಿ, ಅಳತೆ ವಹಿಯಲ್ಲಿ ದಾಖಲಿಸಿದ ನಂತರ ಬಿಲ್ಲನ್ನು ನೀಡಿರುವುದರಿಂದ ಸದರಿ ಆರೋಪ ಸುಳ್ಳಾಗಿದೆ. ಪಂಚಾಯತ್ ಸಭೆಗಳಲ್ಲಿ ಚರ್ಚಿಸಿದ ನಂತರ ಅವಶ್ಯಕ ವಿದ್ಯುತ್ ಸಾಮಗ್ರಿಗಳನ್ನು ಖರೀದಿಸಿದೆ. ಪಂಚಾಯತ್‌ನ ಎಲ್ಲಾ ವ್ಯವಹಾರಗಳು ನಿಯಮಾನುಸಾರವಾಗಿ ಇವೆಯೆಂದು ಕಂಡು ಬಂದಿದ್ದರೂ, ದುರುದ್ದೇಶಪೂರ್ವಕವಾಗಿ ದೂರನ್ನು ಸಲ್ಲಿಸಿದ್ದಾರೆಂದು ಹೇಳಿದ್ದಾರೆ.

9. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) 2015–16ನೇ ಸಾಲಿನಲ್ಲಿ ಭದ್ರಾಪುರ ಗ್ರಾಮ ಪಂಚಾಯತಿಯಲ್ಲಿ ನಡೆದ ಲೆಕ್ಕ ತನಿಖೆಯಲ್ಲಿ ಕಂಡು ಬಂದ ಆಕ್ಷೇಪಣೆ ಮತ್ತು ವಸೂಲಿಗೆ ಸೂಚಿಸಿದ ಮೊತ್ತಗಳ ವಿವರಣಾ ಪಟ್ಟಿ ಈ ಕೆಳಗಿನಂತಿವೆ–

ಅ) 13ನೇ ಹಣಕಾಸು ಯೋಜನೆಯಡಿ ಶ್ರೀ.ಶೇಖಪ್ಪ ಅಕ್ಕಿ, ಶ್ರೀಮತಿ.ರುದ್ರಮ್ಮ ಅಂಗಡಿ, ಶ್ರೀ.ಬಸವರಾಜ ಹಸಬಿ, ಶ್ರೀ.ಆನಂದ ಬಡಿಗೇರ, ಶ್ರೀ.ರಾಜಾಸಾಬ ಬನವಾಡಿ, ಶ್ರೀ.ಬಸಪ್ಪ ಹಕಾರಿ, ಶ್ರೀ.ಇಮಾಮಸಾಬ ಬಡೇಖಾನ ಮತ್ತು ಶ್ರೀ.ತುಕಾರಾಮ ರವರಿಗೆ ಆರ್‌ಟಿಜಿಎಸ್ ಮುಖಾಂತರ ತಲಾ ₹12,000/–, ಶ್ರೀ.ಮಕಂದಾರಸಾಬ ಬಡಿಗೇರ ರವರಿಗೆ ₹4,700/– ಮತ್ತು ಶ್ರೀ.ಹನುಮಂತಪ್ಪ ಸುಣಗಾರ ರವರಿಗೆ ₹6,000/– ಗಳನ್ನು ಹೀಗೆ ಒಟ್ಟು ₹1,06,700/–ಗಳನ್ನು ಭರಿಸಲಾಗಿರುವ ವೆಚ್ಚಕ್ಕೆ ಓಚರ್‌ಗಳಿಲ್ಲ;

ಆ) 2014–15ನೇ ಸಾಲಿನಲ್ಲಿ ಪಂಚಾಯತ್ ಸಾಮಾನ್ಯ ಕರ ವಸೂಲಿ ಶಿಲ್ಕು ಬಾಬ್ತು ₹3,539/–ನ್ನು ಜಮಾ ಮಾಡಿಲ್ಲ;

ಇ) ಪ್ರಸಕ್ತ ಸಾಲಿನಲ್ಲಿ ಪಂಚಾಯತಿಯು ವಸೂಲು ಮಾಡಿದ ಆರೋಗ್ಯ ಕರ, ಶಿಕ್ಷಣ ಕರ, ಗ್ರಂಥಾಲಯ ಕರ ಮತ್ತು ಭಿಕ್ಷುಕರ ಕರ ಹೀಗೆ ಒಟ್ಟು ₹17,130/–ಗಳಲ್ಲಿ ಪಂಚಾಯತಿ ನಿಧಿಗೆ ಸೇರಬೇಕಾಗಿದ್ದ ಶೇ.10 ರಷ್ಟು ಮೊಬಲಗನ್ನು ಹೊರತುಪಡಿಸಿ ಸರ್ಕಾರಕ್ಕೆ ಪಾವತಿಸಬೇಕಾದ ಒಟ್ಟು ₹16,898/–ಗಳನ್ನು ಸರ್ಕಾರಕ್ಕೆ ಜಮಾ ಮಾಡಿಲ್ಲ;

ಹೀಗೆ ಒಟ್ಟು ₹1,27,137/–ಗಳನ್ನು ವಸೂಲಾತಿ ಮೊತ್ತ ಎಂದು ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡು ಬಂದಿದೆ.

2) ಮೇಲಿನ ಉಪ ಖಂಡಿಕೆ–1(ಅ) ಖರ್ಚುಗಳ ಅವಧಿಯಲ್ಲಿ ದೂರಿನ 2ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ, 4ನೇ ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದಾರೆಂದು 2015–16ನೇ ಸಾಲಿನ ಲೆಕ್ಕ ಪರಿಶೋಧನೆ ವರದಿಯಲ್ಲಿ ಕಂಡು ಬಂದಿದೆ. ಸದರಿ ಖರ್ಚುಗಳ ಬಾಬ್ತು ₹1,06,700/–ಗಳಿಗೆ ಸಂಬಂಧಪಟ್ಟ ವೋಚರ್‌ಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸದೇ ಇರುವುದರಿಂದ, ಸದರಿ ವೋಚರ್‌ಗಳು ಪಂಚಾಯತ್‌ನಲ್ಲಿ ಲಭ್ಯವಿಲ್ಲದಿರುವುದು ಕಂಡು ಬಂದಿದೆ. ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು–2006ರ ನಿಯಮ 43ರನ್ವಯ ಪಂಚಾಯತ್‌ನಿಂದ ನೀಡಲ್ಪಡುವ ಪ್ರತಿಯೊಂದು ಪಾವತಿಗಳಿಗೆ ಬಿಲ್ ಅಥವಾ ವೋಚರ್‌ಗಳು ಇರಬೇಕಾಗಿರುವುದು ಕಡ್ಡಾಯವಾಗಿದೆ. ಕಾರಣ, ಸದರಿ ₹1,06,700/– ಪಾವತಿಯು ನಿಯಮಬಾಹಿರವಾಗಿದ್ದು, ಸದರಿ ಮೊತ್ತಕ್ಕೆ 2 ಮತ್ತು 4ನೇ ಎದುರುದಾರರುಗಳು ಜವಾಬ್ದಾರರಾಗಿದ್ದಾರೆ;

3) 2014–15ನೇ ಸಾಲಿನಲ್ಲಿ ಪಂಚಾಯತ್ ಸಾಮಾನ್ಯ ಕರ ವಸೂಲಿಯ ಶಿಲ್ಕು ₹3,539/– ಹಾಗೂ ಭೂಮಿ ಮತ್ತು ಕಟ್ಟಡಗಳ ತೆರಿಗೆಗಳ ಬೇಡಿಕೆ ಮತ್ತು ವಸೂಲಿ ಬಾಬ್ತು ₹16,898/– ಆಗಿದ್ದು, ಸದರಿ ಮೊತ್ತವನ್ನು ಪಂಚಾಯತ್‌ನ ಆಯಾಯ ಬ್ಯಾಂಕ್ ಖಾತೆಗೆ \ ಸರ್ಕಾರದ ನಿಧಿಗೆ ಜಮಾ ಮಾಡಿಲ್ಲ ಎಂದು 2015–16ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಪುಟ ಸಂಖ್ಯೆ–13 ಮತ್ತು 15ರಲ್ಲಿ ಕಂಡು ಬಂದಿದೆ. ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು–2006ರ ನಿಯಮ 25(2) ರನ್ವಯ ಪಂಚಾಯತ್‌ನಿಂದ ವಸೂಲಾಗುವ ಕಂದಾಯ \ ಕರ \ ಬಾಡಿಗೆ ಇನ್ನಿತರೆ ವಸೂಲಿ ಹಣವನ್ನು ಕಛೇರಿಯ ನಗದು ವಹಿಗೆ ತೆಗೆದುಕೊಂಡು ಬ್ಯಾಂಕ್ ಚಲನ್ ಮುಖೇನ ಜಮಾ ಮಾಡಬೇಕಾಗಿರುವುದು ಪಂಚಾಯತ್ ಕಾರ್ಯದರ್ಶಿ \ ಅಭಿವೃದ್ಧಿ ಅಧಿಕಾರಿಯ ಕರ್ತವ್ಯ ಆಗಿದೆ. ಕಾರಣ, ಸದರಿ ₹3,539/– ಮತ್ತು ₹16,898/– ಮೊತ್ತವನ್ನು ಜಮಾ ಮಾಡದೇ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ 2ನೇ ಎದುರುದಾರರು ಕರ್ತವ್ಯ ಲೋಪ ಎಸಗಿರುವುದರಿಂದ, ಸದರಿ ಮೊತ್ತಕ್ಕೆ ಸದರಿಯವರೇ ಜವಾಬ್ದಾರರಾಗಿದ್ದಾರೆ;

4) ಏಪ್ರಿಲ್, 2016 ರಿಂದ ಜೂನ್, 2017 ರವರೆಗೆ ಗ್ರಾಮ ಪಂಚಾಯತಿಯ ವಿವಿಧ ಖಾತೆಗಳಿಂದ ಈ ಕೆಳಗಿನಂತೆ ವೆಚ್ಚ ಮಾಡಿದೆಯೆಂದು ಖರ್ಚು ವೆಚ್ಚಗಳ ಮಾಹಿತಿ ಪುಸ್ತಕದಲ್ಲಿ ಕಂಡು ಬಂದಿದೆ –

ಅ. ಗ್ರಾಮ ಪಂಚಾಯತಿಯ ಖಾತೆ ಸಂಖ್ಯೆ:100601011001959 (ವಿಜಯಾ ಬ್ಯಾಂಕ್–ನೀರು ನಿರ್ವಹಣೆ ಖಾತೆ) ಯಿಂದ 'ಸ್ವಂತಕ್ಕೆ' ಎಂದು ಏಪ್ರಿಲ್, 2016 ಮತ್ತು ಡಿಸೆಂಬರ್, 2016, ಜನವರಿ ಮತ್ತು ಮಾರ್ಚ್, 2017ರಲ್ಲಿ ಒಟ್ಟು ₹62,455/–ಗಳನ್ನು ಖರ್ಚು ಮಾಡಿದೆಯೆಂದು ಕಂಡು ಬಂದಿದೆ. ಉಳಿದಂತೆ, ಖಾಸಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳ ಹೆಸರಿನಲ್ಲಿ ಬೇರೆ ಬೇರೆ ಮೊತ್ತವನ್ನು ವೆಚ್ಚ ಮಾಡಿರುವುದು ಸದರಿ ಖಾತೆಯಲ್ಲಿ ಕಂಡು ಬಂದಿದೆ. ಪಂಚಾಯತ್ ಖಾತೆಯಿಂದ 'ಸ್ವಂತಕ್ಕೆ' ಸದರಿ ಮೊತ್ತವನ್ನು ಪಡೆದುಕೊಳ್ಳುವ ಅವಶ್ಯಕತೆ ಏನಿತ್ತೆಂದು ಕಂಡು

B4m/937G/17



ಬಂದಿಲ್ಲ. ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು–2006ರ ನಿಯಮ 49 ರನ್ವಯ ಗುತ್ತಿಗೆದಾರರು, ಸರಬರಾಜುದಾರರು ಮತ್ತು ಇತರೆಯವರಿಗೆ ಹಣವನ್ನು ಅಕೌಂಟ್ ಪೇಯಿ ಚೆಕ್ ಮೂಲಕವೇ ನೀಡಬೇಕು. ಆದರೆ, 'ಸ್ವಂತಕ್ಕೆ' ಎಂದು ಬ್ಯಾಂಕ್ ಖಾತೆಯಿಂದ ಬೇರೆ ಬೇರೆ ದಿನಾಂಕಗಳಂದು ಒಟ್ಟು ₹62,455/–ಗಳನ್ನು ಸಿಬ್ಬಂದಿಯ ಹೆಸರಿನಲ್ಲಿ ಪಡೆದಿರುವುದು ಕಂಡು ಬಂದಿದ್ದು, ಸದರಿ ಖರ್ಚುಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಇಲ್ಲದಿರುವುದರಿಂದ, ಸದರಿ ಮೊತ್ತವು ದುರುಪಯೋಗವಾಗಿದೆಯೆಂದು ಹೇಳಬಹುದಾಗಿದೆ. ಸದರಿ ಅವಧಿಯಲ್ಲಿ 1ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಮತ್ತು 5ನೇ ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿರುವುದರಿಂದ, ಸದರಿ ಮೊತ್ತಕ್ಕೆ 1 ಮತ್ತು 5ನೇ ಎದುರುದಾರರು ಜವಾಬ್ದಾರರಾಗಿದ್ದಾರೆ;

ಆ. ಖಾತೆ ಸಂಖ್ಯೆ:100601011220502 (ವಿಜಯಾ ಬ್ಯಾಂಕ್–13ನೇ ಹಣಕಾಸು ಯೋಜನೆ) ರಿಂದ 'ಪಿ.ಡಿ.ಓ / ಅಧ್ಯಕ್ಷರು ಗ್ರಾಮ ಪಂಚಾಯತಿ ಸಾಶ್ವಿ ಹಳ್ಳಿ (ಸೌದಾಪುರ)' ಹೆಸರಿನಲ್ಲಿ ₹32,000/–ಗಳನ್ನು ಸೆಪ್ಟೆಂಬರ್, 2016ರಲ್ಲಿ ಖರ್ಚು ಮಾಡಿರುವುದು ಕಂಡು ಬಂದಿದೆ. ಅದೇ ಖಾತೆಯಿಂದ ನೀರು ನಿರ್ವಹಣೆ ಖಾತೆಗೆ ₹37,952/–ಗಳನ್ನು ನವೆಂಬರ್, 2016ರಲ್ಲಿ ವರ್ಗಾವಣೆ ಮಾಡಿದೆ ಎಂದು ನಮೂದಾಗಿದೆ. ಸದರಿ ₹37,952/– ಖಾತೆ ಸಂಖ್ಯೆ:100601011001959ಗೆ ಚೆಕ್ ಸಂಖ್ಯೆ:36894820 ಮತ್ತು 36894822ರಲ್ಲಿ ಜಮಾ ಆಗಿದೆ. 'ಪಿ.ಡಿ.ಓ / ಅಧ್ಯಕ್ಷರು ಗ್ರಾಮ ಪಂಚಾಯತಿ ಸಾಶ್ವಿ ಹಳ್ಳಿ (ಸೌದಾಪುರ)' ಹೆಸರಿನಲ್ಲಿ ₹32,000/–ಗಳನ್ನು ಖಾತೆ ಸಂಖ್ಯೆ:100601011220502 ಯಿಂದ ಖರ್ಚು ಮಾಡಿದ ಬಗ್ಗೆ ಯಾವುದೇ ದಾಖಲೆಗಳು ಇಲ್ಲದಿರುವುದರಿಂದ, ಸದರಿ ಮೊತ್ತವು ದುರುಪಯೋಗವಾಗಿದೆ. ಸದರಿ ಅವಧಿಯಲ್ಲಿ 1ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಮತ್ತು 5ನೇ ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿರುವುದರಿಂದ, ಸದರಿ ಮೊತ್ತ ₹32,000/–ಕ್ಕೆ 1 ಮತ್ತು 5ನೇ ಎದುರುದಾರರು ಜವಾಬ್ದಾರರಾಗಿದ್ದಾರೆ;

ಇ. ಖಾತೆ ಸಂಖ್ಯೆ:100601010008242 (ವಿಜಯಾ ಬ್ಯಾಂಕ್–ವರ್ಗ–1 ಖಾತೆ) ರಿಂದ 'ಸ್ವಂತಕ್ಕೆ' ಎಂದು ಏಪ್ರಿಲ್ ರಿಂದ ಜೂನ್, 2016, ಆಗಸ್ಟ್ ರಿಂದ ಡಿಸೆಂಬರ್, 2016, ಮಾರ್ಚ್ ಮತ್ತು ಏಪ್ರಿಲ್, 2017ರಲ್ಲಿ ಒಟ್ಟು ₹1,10,284/–ಗಳನ್ನು ಖರ್ಚು ಮಾಡಿರುವುದು ಕಂಡು ಬಂದಿದೆ. ಉಳಿದಂತೆ, ಖಾಸಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳ ಹೆಸರಿನಲ್ಲಿ ಬೇರೆ ಬೇರೆ ಮೊತ್ತವನ್ನು ವೆಚ್ಚ ಮಾಡಿರುವುದು ಸದರಿ ಖಾತೆಯಲ್ಲಿ ಕಂಡು ಬಂದಿದೆ. ಪಂಚಾಯತ್ ಖಾತೆಯಿಂದ 'ಸ್ವಂತಕ್ಕೆ' ಸದರಿ ಮೊತ್ತವನ್ನು ಪಡೆದುಕೊಳ್ಳುವ ಅವಶ್ಯಕತೆ ಏನಿತ್ತೆಂದು ಕಂಡು ಬಂದಿಲ್ಲ. ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು–2006ರ ನಿಯಮ

49 ರನ್ವಯ ಗುತ್ತಿಗೆದಾರರಿಗೆ, ಪೂರೈಕೆದಾರರಿಗೆ ಮತ್ತು ಇತರೆಯವರಿಗೆ ಹಣವನ್ನು ಅಕೌಂಟ್ ಪೇಯಿ ಚೆಕ್ ಮೂಲಕವೇ ಮಾಡಬೇಕು. ಆದರೆ, 'ಸ್ವಂತಕ್ಕೆ' ಎಂದು ಬ್ಯಾಂಕ್ ಖಾತೆಯಿಂದ ಬೇರೆ ಬೇರೆ ದಿನಾಂಕಗಳಂದು ಒಟ್ಟು ₹1,10,284/–ಗಳನ್ನು ಸಿಬ್ಬಂದಿಯ ಹೆಸರಿನಲ್ಲಿ ಪಡೆದಿರುವುದು ಕಂಡು ಬಂದಿದ್ದು, ಸದರಿ ಖರ್ಚುಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಇಲ್ಲದಿರುವುದರಿಂದ, ಸದರಿ ಮೊತ್ತವು ದುರುಪಯೋಗವಾಗಿದೆ. ಸದರಿ ಅವಧಿಗಳಲ್ಲಿ 1ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ (ಆಗಸ್ಟ್, 2016ರಲ್ಲಿ 3ನೇ ಎದುರುದಾರರು) ಮತ್ತು 5ನೇ ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ₹1,10,284/–ರ ಪೈಕಿ 3ನೇ ಎದುರುದಾರರು ₹2,000/–ಗಳಿಗೆ ಮತ್ತು 1ನೇ ಎದುರುದಾರರು ₹1,08,284/–ಗಳಿಗೆ ಹಾಗೂ 5ನೇ ಎದುರುದಾರರು ₹1,10,284/–ಗಳಿಗೆ ಜವಾಬ್ದಾರರಾಗಿದ್ದಾರೆ;

ಈ. ವಿಜಯಾ ಬ್ಯಾಂಕ್ ಖಾತೆ ಸಂಖ್ಯೆ:100601011004548 ರಿಂದ 'ಸ್ವಂತಕ್ಕೆ' ಎಂದು ಜೂನ್, 2017ರಲ್ಲಿ ₹5,432/– ಗಳನ್ನು ಖರ್ಚು ಮಾಡಿರುವುದು ಕಂಡು ಬಂದಿದೆ. ಸದರಿ ಅವಧಿಯಲ್ಲಿ 1ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಮತ್ತು 5ನೇ ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದು, ಸದರಿ ಮೊತ್ತಕ್ಕೆ ಅವರಿಬ್ಬರೂ ಜವಾಬ್ದಾರರಾಗಿದ್ದಾರೆ. ಉಳಿದಂತೆ, ವಿವಿಧ ಕಾಮಗಾರಿಗಳಿಗೆ ಹಾಗೂ ಸಾಮಗ್ರಿ ಖರೀದಿಗೆ ಸದರಿ ಖಾತೆಯಿಂದ ಹಣ ಖರ್ಚು ಮಾಡಿರುವುದು ಕಂಡು ಬಂದಿದೆ;

ಉ. ಖಾತೆ ಸಂಖ್ಯೆ:17041054534 (ಕೆವಿಜಿ ಬ್ಯಾಂಕ್ – ಎಂಜಿಎನ್‌ಆರ್‌ಇಜಿ) ಯಿಂದ ಬಿಎಸ್‌ಎನ್‌ಎಲ್ ಬಿಲ್ ಪಾವತಿಗೆ ಹಣ ಖರ್ಚು ಮಾಡಿರುವುದು ಕಂಡ ಬರುವುದಲ್ಲದೆ ಖಾಸಗಿ ಸಂಸ್ಥೆಗಳಾದ ಹೆಗಡೆ ಎಂಟರ್‌ಪ್ರೈಸಸ್, ಯಶಸ್ವಿನಿ ಐ.ಟಿ ಸೊಲ್ಯುಷನ್ಸ್ ಮತ್ತು ವಾಸವಿ ಪುಸ್ತಕಾಲಯ ರವರಿಗೆ ಹಣ ಪಾವತಿ ಮಾಡಿರುವುದು ಕಂಡು ಬಂದಿದೆ;

5) ಸಿಎಫ್‌ಎಲ್ ಬಲ್ಬ್‌ಗಳು, ಹೋಲ್ಡರ್‌ಗಳು, ವೈಯರ್, ಸ್ವಿಚ್‌ಗಳು ಮುಂತಾದ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ ದರಪಟ್ಟಿಗಳನ್ನು ಆಹ್ವಾನಿಸದೆ ನೇರವಾಗಿ ಸಿದ್ದಲಿಂಗೇಶ್ವರ ಟ್ರೇಡರ್ಸ್, ನವಲಗುಂದ ರವರಿಗೆ ದಿನಾಂಕ:20/11/2016 & 06/01/2017ರಂದು ಪತ್ರಗಳನ್ನು ಬರೆದು ಸಾಮಗ್ರಿಗಳನ್ನು ಖರೀದಿಸಿದೆಯೆಂದು ಸದರಿ ಎರಡು ದಾಖಲೆಗಳಲ್ಲಿ ಕಂಡು ಬಂದಿದೆ. ಸಾಮಗ್ರಿಗಳನ್ನು ಖರೀದಿಸಿದ ಬಗ್ಗೆ ಬಿಲ್ಲು/ವೋಚರುಗಳಿಲ್ಲ. ಸದರಿ ದಾಖಲೆಗಳಲ್ಲಿ ಮೊತ್ತ ನಮೂದಾಗಿಲ್ಲ. ನೇರವಾಗಿ ಕೈ ಪಾವತಿ ಮೂಲಕ ಸಿದ್ದಲಿಂಗೇಶ್ವರ ಟ್ರೇಡರ್ಸ್, ನವಲಗುಂದ ರವರಿಗೆ ಹಣವನ್ನು ಸಂದಾಯ ಮಾಡಿದೆಯೆಂದು ಕಂಡು ಬಂದಿದೆ. ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು–2006ರ ನಿಯಮ 49ರ ಪ್ರಕಾರ ₹50/–ಕ್ಕಿಂತ ಹೆಚ್ಚಿನ ಮೊತ್ತವನ್ನು ಸರಬರಾಜುದಾರರಿಗೆ ಪಾವತಿಸಬೇಕಾದಲ್ಲಿ ಅವರ ಹೆಸರಿನಲ್ಲಿ ಅಕೌಂಟ್ ಪೇಯಿ ಚೆಕ್ ಮೂಲಕವೇ ನೀಡಬೇಕು. ಸದರಿ ಹಣ ಪಾವತಿಯಲ್ಲಿ ನಿಯಮ 49ರ ಉಲ್ಲಂಘನೆಯಾಗಿದೆ. ಕೆಎಫ್‌ಸಿ ಪರಿಚ್ಛೇದ 17ರ ಪ್ರಕಾರ

OSm/9376/17



ಅಗತ್ಯವಿರುವ ಸರಕು ಸಾಮಗ್ರಿಗಳನ್ನು ಮಾರುಕಟ್ಟೆಯಲ್ಲಿ ಖರೀದಿಸುವ ಸಾಧಿಲ್ವಾರು ವೆಚ್ಚದ ಕೈಪಿಡಿ 1958, ನಿಯಮಗಳ ನಿಯಮ 55(49)(ಎ)ರನ್ವಯ ₹5,000/- ಮೀರಿದ ₹1,00,000/-ದವರೆಗಿನ ಖರೀದಿಗಳನ್ನು ಸ್ಪರ್ಧಾತ್ಮಕ ಕೊಟೇಷನ್ ಕರೆಯುವ ಮೂಲಕ ಮಾಡತಕ್ಕದ್ದು. ಕೆಎಫ್‌ಸಿ ಪರಿಚ್ಛೇದ 57ರನ್ವಯ ಪ್ರತಿಯೊಂದು ಖರ್ಚಿನ ಬಗ್ಗೆ ವೋಚರ್‌ಗಳು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಹೊಂದಿರಬೇಕು. ಸದರಿ ನಿಯಮಾವಳಿಗಳ ಉಲ್ಲಂಘನೆ ಆಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಸದರಿ ಖರೀಧಿ ಅವಧಿಯಲ್ಲಿ 1ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಮತ್ತು 5ನೇ ಎದುರುದಾರರು ಪಂಚಾಯತ್ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಸದರಿಯವರುಗಳು ಮೇಲೆ ಹೇಳಿದ ಕಾನೂನಿನ ಅಂಶಗಳನ್ನು ಅನುಸರಿಸದೇ, ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ;

6) ಭದ್ರಾಪುರ ಗ್ರಾಮದ ಶ್ರೀ.ಸುರೇಶ್ ನಾಯಕ್ ರವರ ಮನೆಯಿಂದ ಪಂಚಾಯತ್‌ವರೆಗೆ ಸಿಸಿ ರಸ್ತೆ ಕಾಮಗಾರಿಯನ್ನು 2016-17ನೇ ಸಾಲಿನಲ್ಲಿ 14ನೇ ಹಣಕಾಸು ಯೋಜನೆಯಡಿ ನಿರ್ವಹಿಸಿದ್ದು, ಸದರಿ ಕಾಮಗಾರಿಯ ಬಾಬ್ತು ಗುತ್ತಿಗೆದಾರರಾದ ಶ್ರೀ.ಎ.ಬಿ.ಛಲವಾದಿ ರವರಿಗೆ ದಿನಾಂಕ:10/03/17ರ ಚೆಕ್ ಸಂಖ್ಯೆ:259358ರಲ್ಲಿ ₹83,791/-ಗಳನ್ನು ನೀಡಿದೆ. ಸದರಿ ಬಿಲ್ಲಿಗೆ 1 ಮತ್ತು 5ನೇ ಎದುರುದಾರರುಗಳು ಸಹಿ \ ಹೆಬ್ಬೆಟ್ಟು ಹಾಕಿದ್ದಾರೆ. ಕಾಮಗಾರಿಯ ಅಳತೆ ಪುಸ್ತಕವನ್ನು ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು-2006ರ ನಿಯಮ 85ರಲ್ಲಿ ಹೇಳಿದಂತೆ ನಮೂನೆ-37ರಲ್ಲಿ ನಿರ್ವಹಿಸದೇ ಇರುವುದು ಕಂಡು ಬಂದಿದೆ. ಅಳತೆ ಪುಸ್ತಕದಲ್ಲಿ ಕಾಮಗಾರಿಯ ಅಳತೆಯನ್ನು ದಾಖಲಿಸಿದ ದಿನಾಂಕ ನಮೂದಾಗಿಲ್ಲ. ಕಾಮಗಾರಿ ಮುಕ್ತಾಯವಾದ ದಿನಾಂಕವನ್ನು ಅಳತೆ ಪುಸ್ತಕದಲ್ಲಿ ನಮೂದಿಸಿಲ್ಲ. ಸದರಿ ಕಾಮಗಾರಿಯ ಅಂದಾಜು ₹25,000/-ಗಳು ಮೀರಿದ್ದು, ₹4 ಲಕ್ಷಕ್ಕಿಂತ ಒಳಗಡೆ ಇರುವುದರಿಂದ ನಿಯಮ 86(2) ರನ್ವಯ ಪಂಚಾಯತ್ ಅಧ್ಯಕ್ಷರಾದ 5ನೇ ಎದುರುದಾರರು ಕಾಮಗಾರಿಯ ಚೆಕ್ ಮೆಷರ್‌ಮೆಂಟನ್ನು ಮಾಡಬೇಕಿದ್ದು, ಆದರೆ ಸದರಿಯವರು ಚೆಕ್ ಮೆಷರ್‌ಮೆಂಟನ್ನು ಮಾಡಿಲ್ಲ. ನಿಯಮ 85(6) ರನ್ವಯ ಗುತ್ತಿಗೆದಾರರಿಗೆ ಹಣ ಸಂದಾಯ ಮಾಡುವ ಸಂದರ್ಭದಲ್ಲಿ ಅಳತೆ ಪುಸ್ತಕದ ಮೇಲೆ "ಪೇಡ್ & ಕ್ಯಾನ್ಸಲ್ಡ್" ಮೊಹರನ್ನು ಹಾಕಬೇಕು. ಕಡತದಲ್ಲಿರುವ ಅಳತೆ ಪುಸ್ತಕದ ಪ್ರತಿಯಲ್ಲಿ ಸದರಿ ಮೊಹರು ಕಂಡು ಬಂದಿಲ್ಲ. ಕಾರಣ, ಸದರಿ ಹಣ ಪಾವತಿಯಲ್ಲಿ 1 ಮತ್ತು 5ನೇ ಎದುರುದಾರರುಗಳು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ.

10. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 1 ರಿಂದ 5ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

11. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 5ನೇ ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ನಾಲ್ಕು (4) ಮತ್ತು 5ನೇ ಎದುರುದಾರರುಗಳು ಪಂಚಾಯತ್ ಅಧ್ಯಕ್ಷರುಗಳಾದ್ದರಿಂದ, ಸದರಿಯವರುಗಳ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಸದರಿಯವರುಗಳಿಂದ ದುರುಪಯೋಗದ ಮೊತ್ತವನ್ನು ವಸೂಲಿ ಮಾಡಲು ಸಕ್ಷಮ ಪ್ರಾಧಿಕಾರಕ್ಕೆ ನಿರ್ದೇಶಿಸಿದೆ.

13. ಅದಲ್ಲದೆ, 1 ರಿಂದ 3ನೇ ಎದುರುದಾರರುಗಳು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 1 ರಿಂದ 3ನೇ ಎದುರುದಾರರುಗಳ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

14. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

(ನ್ಯಾಯಾಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.